doc-131
TP-2

SATYAVADI Founded 1917 Regd. No. M 1299

ಸತ್ಯವಾದಿ

(ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟದ್ದು)

ಸಂಪುಟ 29 ಸಂಚಿಕೆ 166 | ಶನಿವಾರ 9–3–46 | ಬಿಡಿಪ್ರತಿ 3 ಪೈ

ಶ್ರೀ ಗಾಂಧೀಜೀಯವರ ದಗ್ಧಹಸ್ತವು

(ಸಿನ್ಹೆ ಸಂಚಿಕೆಯಿಂದ)

ಆದರೆ ಆ ಸಭೆಯಲ್ಲಿ ಶ್ರೀ ರಾಜಾಜಿಯವರ ವಿರುದ್ಧ ತೀವ್ರಾಸನವಾಯಿತು. ಅನಂತರ ಶ್ರೀ ಗಾಂಧಿಯವರು ಹರಿಜನ ಪತ್ರಿಕೆಯಲ್ಲಿ ಶ್ರೀ ರಾಜಾಜಿಯವರ ಮೇಲೆ ಒಂದು ಲೇಖನವನ್ನು ಬರೆದು ಅವರು ಬಹು ದೊಡ್ಡ ಮುಖಂಡರೆಂತಲೂ, ಅವರ ಮುತ್ಸದ್ದಿತನವನ್ನು ದಕ್ಷಿಣ ಭಾರತವು ಕಳೆದುಕೊಳ್ಳಬಾರದೆಂತಲೂ ವಗೈರಾ ಬರೆದಿದ್ದರು. ಆ ಲೇಖನವು ಶ್ರೀ ರಾಜಾಜಿಯವರು ಅಂತೆ ಸಮುದ್ರ ಮಥನ ಮಾಡಿ ವಿಷವನ್ನು ಹೊರಗೆಡವಿ ವಿಷವು ಶ್ರೀರಾಜಾಜಿಯವರ ರಾಜಕೀಯ ಜೀವನವನ್ನೇ ಬಲಿ ತೆಗೆದುಕೊಂಡಿತು ಶ್ರೀ ರಾಜಾಜಿಯವರು ರಾಜಕೀಯ ರಂಗದಿಂದ ಅದೃಶ್ಯರಾದರು. ಪುರಶ್ಚರಣವಾಗುವಾಗ್ಗೆ ಶ್ರೀ ಗಾಂಧಿಯವರ ಆಶೀರ್ವಾದವನ್ನು ಪಡೆದ ಶ್ರೀ ರಾಜಾಜಿಯವರು ಶ್ರೀ ಸಾಂಬಮೂರ್ತಿಯವರನ್ನು ಎತ್ತಿ ಹಿಡಿದು ಅವನ್ನು ಮದ್ರಾಸು ವಿಶ್ವವಿದ್ಯಾನಿಲಯದ ಹುರಿಯಾಳಾಗಿ ನೇಮಿಸಬೇಕೆಂದು ಕೋರಿದ್ದರು. ಆದರೆ ಆ ಆಶೀರ್ವಾದದ ಫಲವಾಗಿ ಶ್ರೀ ಸಾಂಬಮೂರ್ತಿಯವರು ಬಯಲಿಗೆ ಬರಲು ಕೂಡಾ ಆಗಲಿಲ್ಲ. ವಿದ್ಯಾಸ ವಿಷ್ಯಲಯದ ಹುರಿಯಳಾಗಿ ನಿಂದೂ ದೇಶದಲ್ಲಿಲ್ಲದ ಮತ್ತು ವಿಲಾಯಿತಿ ದೇಶದಲ್ಲಿ ಆಜಾದ್ ಸೇನೆಯ ಪರವಕಾಲತ್ತು ನಡೆಸುತ್ತಿರುವ ಶ್ರೀ ಭಾಸ್ಯಂ ಇವರು ನೇಮಿಸಲ್ಪಟ್ಟರು.

ಈ ಪ್ರಕಾರವಾಗಿ ಶ್ರೀ ಗಾಂಧಿಯವರು ತಮ್ಮ ವರ್ಚಸ್ಸನ್ನು ಪ್ರತಿದಿನವೂ ರಾಜಕೀಯ ರಂಗದಲ್ಲಿ ಕಳಕೊಳ್ಳುತ್ತಿರುವರು. ಅವರು ತಮ್ಮ ಅಧ್ಯಾತ್ಮಿಕ ತಪಸ್ಸನ್ನು ಡೌಲಾಗಿ ಉಪಯೋಗಿಸಿಕೊಳ್ಳದೆ ಹೋಗಿದ್ದರೆ ಅವರು ಎಂದೋ ಭಾರತ ರಾಜಕೀಯ ರಂಗದಿಂದ ಹೊರಬಿದ್ದಿರುವರು. ಅವರು ಈಗ ರಾಜಕೀಯ ರಂಗದಲ್ಲಿ ಅಧ್ಯಾತ್ಮಿಕವನ್ನು ಹಾಳುಮಾಡುತ್ತಿರುವರು ಸನ್ಯಾಸಿಯನ್ನು ಅಪ್ಪಿಕೊಂಡರೆ ಮೇಲಿಗೆಲ್ಲ ಬೂದಿ ಎನ್ನುವಂತೆ, "ಮೇಲ್ಕಂಡ ಉದಾಹರಣೆಗಳಿಂದ ಗಾಂಧೀ ಭಕ್ತರು ಎಚ್ಚರಪಡಲಿ. ಮೇಲ್ಕಂಡ ಲೇಖನವು ಕೆಲವರನ್ನು ಕೆರಳಿಸಬಹುದು. "ಅದರೆ ಅವರ ಹೆಸರನ್ನು ಈ ಚುನಾವಣೆಯಲ್ಲಿ 'ಪ್ರಾಸ್ಟಿಟ್ಯೂಟ್' ಮಾಡಿ ಒನತೆಯಲ್ಲಿ ಅಂಧಶ್ರದ್ಧೆಯನ್ನುಂಟು ಮಾಡಿ ಜನತೆಯ ಸಾಂತಾಸಾರ ವಿಚಾರ ಪರವಾಗದಂತೆ ಕೆಲವರು ಮಾಡುವುದರಿಂದ ನಾವು ಜನತೆಯನ್ನು ಎಚ್ಚರಿಸಲು ಈ ಲೇಖನವನ್ನು ಬರೆಯಬೇಕಾಗಿ ಬಂತು. (ನ. ಸಂ.)

ಸರ್ಕಾರದ ಖಂಡನಾ ನಿರ್ಣಯ

ಪರಿಹಾರಿಬೇಕಂತೆ !

ಬೆಂಗಳೂರು, ಮಾ 6 — ಕೋಲಾರದ ಚಿನ್ನದ ಗಣಿ ಕಂಪೆನಿಗಳು 20 ಸಾವಿರ ಮಂದಿ ಕೆಲಸಗಾರರಿಂದ ತಮ್ಮ ಉತ್ಪತ್ತಿಗೆ ಭಂಗವಾಗಿ ನಷ್ಟವಾಗಿರುವದರಿಂದ ತನಗೆ ಪರಿಹಾರವಾಗಿ 8 ಲಕ್ಷ ರೂ. ಗಳನ್ನು ಕೊಡಬೇಕೆಂದು ಸರ್ಕಾರದವರನ್ನು ಕೇಳಿರುವುದಾಗಿ ತಿಳಿಯಬಂದಿದೆ.

ಗಷ್ಯಾದ ಸಹಾಯ

ಲಕ್ನೋ, ಮಾ 6 — ಚಿನ್ನಾರರ ಪಾಕೀಸ್ತಾನಕ್ಕೆ ರಷ್ಯಾದವರ ಸಹಾಯ ವಿರುವುದಾಗಿ ಭೂಪಾಲಿನ ಸಚಿವರಾದ ಸಾಹೆಬ್ ಮಹಮದ್ ಕುರೈಷಿಯವರು ಪತ್ರಿಕೋದ್ಯೋಗಿಗಳಿಗೆ ತಿಳಿಸಿರುವರೆಂದು ಹೇಳಲಾಗಿದೆ.

ಡೆಲ್ಲಿಯಲ್ಲಿ ನಡೆದ ಗುಂಡಿನ ಪ್ರಕರಣದಲ್ಲಿ 11 ಮುಣಗಳಾಗಿವೆ. ಹಳೇ ಡೆಲ್ಲಿಯಲ್ಲಿ ಕರ್ಫ್ಯೂ ಜಾರಿಯಾಗಿದೆ.

ಬ್ರಿಟಿಷ್ ಮಂತ್ರಿ ನಿಯೋಗ ಇದೇ ತಾ || 25 ಕ್ಕೆ ಕರಾಚಿಗೆ ಬರುವುದು.

ಪಂಜಾಬ್ ಚುನಾವಣೆ ಕುರಿತು ಚಿನ್ನಾರು ಸಮುದಲ್ಲಿ ಪಾಕೀಸ್ತಾನಕ್ಕೆ ಜಯ ಲಭಿಸಿತೆಂದಿರುವರು.

ಕೋಮುವಾರು ಗಲಭೆಗಳನ್ನು ತಡೆಗಟ್ಟಲು ಪಂಜಾಬಿನಲ್ಲಿ ಮೆರವಣಿಗೆ, ಸಭೆ ಇತ್ಯಾದಿಗಳು ಪ್ರತಿಬಂದಿಸಲ್ಪಟ್ಟಿವೆ.

ಚೀಣಾದಲ್ಲಿ ಪತ್ರಿಕೆಗಳ ಮೇಲೆ ಸೆನ್ಸಾರ್‌ಷಿಪ್ಪನ್ನು ವಜಾ ಮಾಡಲಾಗಿದೆ.

ರೂ. 70000 ಅಂದಾಜಿನಲ್ಲಿ ಬೆಂಗಳೂರಿನಲ್ಲಿ ವಿದ್ಯಾರ್ಥಿ ವಸತಿಯನ್ನು ಕಟ್ಟಲು ಪೌರಸಭೆ ಯೋಚಿಸಿದೆ.

ಡೆಲ್ಲಿ ಗುಂಡಿನ ಪ್ರಕರಣದ ಬಗ್ಗೆ ಬಂದ ನಿಲುವಳಿ ಸೂಚನೆಯನ್ನು ಚರ್ಚಿಸಲು ಕೇಂದ್ರ ಸಭೆಯಲ್ಲಿ ಅವಕಾಶ ಸಿಕ್ಕಿತು.

ಕಲ್ಕತ್ತಾ, ಮಾ 7 — ಕಲ್ಕತ್ತಾದ ಲಾಡ ನವೆಂಬರ್ ಗಲಭೆ ಸಂಬಂಧದಲ್ಲಿ ಗುಂಡಿನೇಟಿಗೆ ಆಹುತಿಯಾದ ಒಬ್ಬನ ಶವದ ಮಹಜರು ಸಂಬಂಧದಲ್ಲಿ ಪೋಲಿಸರು ಸಕಾರಣವಿಲ್ಲದೆ ಗುಂಡು ಹಾರಿಸಿದ್ದಕ್ಕಾಗಿ ಈ ಸಾವು ಆಯಿತೆಂದೂ ಮತ್ತು ತಮ್ಮ ಅಧಿಕಾರ ಮೀರಿ ಪೋಲೀಸಿನವರು ವರ್ತಿಸಿದ್ದಾರೆಂದೂ ಪಂಚಾಯಿತರು ಅಭಿಪ್ರಾಯ ಪಟ್ಟಿರುವರು

ಲಂಡನ್, ಮಾ 6 — ಭಾರತ ರಕ್ಷಣದಲ್ಲಿ ಪಕೀಸ್ತಾನ ಒಂದು ಆತಂಕವೆಂದು ಲಾರ್ಡ್ ಷೋರ್ಲೆಯವರು ಅಭಿಪ್ರಾಯ ಪಟ್ಟಿರುವರು.

ಲಂಡನ್, ಮಾ 7 —ಭಾರತೀಯರು ದಾರಿದ್ರ್ಯವನ್ನು ಸ್ವೀಕರಿಸುತ್ತಾರಾದ್ದರಿಂದ ಅವರು ಬಡವರಾಗಿರುವರು ಎಂದು ಪಾರ್ಲಿಮೆಂಟರಿ ನಿಯೋಗದ ಶ್ರೀಮತಿ ನಿಕೋಲಸರು ಹೇಳಿರುತ್ತಾರೆ ಉಪಾಧ್ಯಾಯರ ಸುಬಳ ಕಡಿಮೆ ಎಂದು ಹೇಳಿರುವರು.

ಲಂಡನ್, ಮಾ 7 — ಬರ್ಲಿನ್‌ನ ರಷ್ಯಾದ ಭಾಗಗಳಲ್ಲಿಯು ಎಲ್ಲಾ ಪ್ರಮುಖ ಬ್ಯಾಂಕ್‌ಗಳನ್ನೂ ಸಶಸ್ತ್ರ ಪಡೆಯ ಸಿಪಾಯಿಗಳು ಆಕ್ರಮಿಸಿ ಮುಖ್ಯಾಧಿಕಾರಿಯನ್ನು ದಸ್ತಗಿರಿ ಮಾಡಿ ಬಾಕಿ ಕೆಲಸಗಾರರನ್ನು ಮೈನುರಿಯ ಜೆಚ್ಚಿಹಾಕಿರುವರು

ಮದರಾಸು, ಮಾ 8 — ಪೆಟ್ರೋಲು ದರ ಗ್ಯಾಲನ್ನಿಗೆ ರೂ 1–12–0 ಯಿಂದ 1–9–0 ಗೆ ಇಳಿಸಲಾಗಿದೆ

ಪೆಷಾವರ್, ಮಾ 7 — ಗಡಿನಾಡಿನಲ್ಲಿ ಕಾಂಗ್ರೆಸ್ ಮಂತ್ರಿಮಂಡಲ ಸ್ಥಾಪನೆಯಾಯಿತು.

ಖಂಡನಾ ನಿರ್ಣಯ

ನವದೆಹಲಿ, ಮಾ 8 — ನಿನ್ನೆಯ ದಿವಸದ ಗಲಭೆಯಲ್ಲಿ ಪೋಲಿಸರು ನಿರಪರಾಧಿಗಳಾದ ಪ್ರಜೆಗಳ ಮೇಲೆ ಗುಂಡು ಹಾರಿಸಿ, ಟೀರ್ ಗ್ಯಾಸ್ ಮತ್ತು ಲಾಠಿ ಪ್ರಯೋಗಿಸಿದ ಬಗ್ಗೆ ಸರ್ಕಾರವನ್ನು ಖಂಡಿಸುವ ನಿಲುವಳಿ ಸೂಚನೆಯು ಅಂಗೀಕೃತವಾಯಿತು.

ವಿವಿಧ ವರ್ತಮಾನ

ಲಕ್ನೋ, ಮಾ 7 — ಸಂಯುಕ್ತ ಸರ್ಕಾರದವರು ನ್ಯಾಷನಲ್ ಪತ್ರಿಕೆಯು ವೇಳೆ ಹಾಕಿದ್ದ ಶೇವಣಾತಿ ಆಜ್ಞೆಯನ್ನು ರದ್ದುಪಡಿಸಿದ್ದಾರೆ.

ಮೈಸೂರು, ಮಾ 8 — ಮೈಸೂರು ಆಸ್ಪತ್ರೆ ಸೌಕರ್ಯ ನಿಧಿಯ ಲಾಟರಿಯು ಮಾರ್ಚ್ ತಾ || 10 ನೇ ಭಾನುವಾರ ಬೆಂಗಳೂರು ಸರ್ ಪುಟ್ಟಣ್ಣಶೆಟ್ಟಿ ಟೌನ್ ಹಾಲಿನಲ್ಲಿ ತೆರೆಯಲಾಗುವುದೆಂದು ತಿಳಿಯಬಂದಿದೆ.

ಮದರಾಸು, ಮಾ, 6 — ಮುನ್ಸಿಪಲ್‌ಗಳು ಪ್ರಾರಂಭದಿಂದ ಗಟ್ಟಿಮುಟ್ಟಾಗಿರುವ ಭಿಕ್ಷುಕರು ಹಿಡಿಯಲ್ಪಟ್ಟು ಕೆಲಸದ ಮಂದಿರಗಳಿಗೆ ಸೇರಿಸಿ ಅವರಿಗೆ ಬೀರೆ ಬೀರೆ ಕಸಬುಗಳಲ್ಲಿ ತರಬೇತು ಕೊಡಲಾಗುವುದೆಂದು ಪ್ರಕಟವಾಗಿದೆ

ಕರಾಚಿ ಮಾ 8— ನಾವಿಕರ ಮುಷ್ಕರ ಸಂಬಂಧದಲ್ಲಿ ಇಲ್ಲಿ ಸಾರಲಾಗಿದ್ದ 144 ನೇ ಸೆಕ್ಷನ್ನನ್ನು ಡಿ || ಮ್ಯಾಜಿಸ್ಟ್ರೇಟರು ವಾಪಸ್ ತೆಗೆದುಕೊಂಡರು

ಕರಾಚಿ, ಮಾ 6 — 'ಭಾರತಕ್ಕೆ ಒಳ್ಳೆ ಭವಿಷ್ಯವಿದೆ ಭಾರತ ಚೀನಗಳ ಭಾಂಧವ್ಯ ಭದ್ರವಾಗಿ ಇರುವುದು' ಎಂಬುದಾಗಿ ಲಂಡನ್‌ನಿಂದ ಚೀನಕ್ಕೆ ವಾಪಸಾಗುತ್ತಿರುವ ಪೆಲಿಗ್ರ್ಯಿ ಕೂ ಹೇಳಿರುವರು.

ಬೊಂಬಾಯಿ, ಮಾ 6 — ಕ್ವಿಟ್ ಇಂಡಿಯಾ ಠರಾವಿನ ಆಧಾರದ ಮೇಲೆ ಬ್ರಿಟಿಷ್ ಸಚಿವ ನಿಯೋಗದೊಂದಿಗೆ ಒಪ್ಪಂದವೆಂದು ಸರ್ದಾರ ಪಟೇಲರು ನುಡಿದಿರುವರು.

ಪೂನಾ, ಮಾ 6 — ಲಂಚ ನಿರ್ಮೂಲವಾಗುವವರೆಗೆ ಹೆಚ್ಚು ಆಹಾರ ಬೆಳೆಯುವ ಯೋಜನೆ ಸಫಲವಾಗುವುದಿಲ್ಲವೆಂದು ಗಾಂಧೀಜೀ ಹೇಳಿದ್ದಾರೆ.

ಚಿಕ್ಕಮಗಳೂರು, ಮಾ 6 — ಹುರಿಯುವ ಮತ್ತು ಮಾರುವ ಲೈಸನ್ಸುಗಳನ್ನು ವಜಾ ಮಾಡಲ್ಪಟ್ಟಿದ್ದು ಪುನಃ ಕೊಡುವುದಾಗಿ ತಿಳಿಯಬಂದಿದೆ.

ಚಿಕ್ಕವಗಳೂರು, ಮಾ 5 — ಹುಲ್ಲಿನ ಗಾಡಿಯಲ್ಲಿ ಸಾಗಿಸಲ್ಪಡುತ್ತಿದ್ದ 44 ಸೇರಿನ ಅಕ್ಕಿ ಚೀಲಗಳೆರಡನ್ನು ಪತ್ತೆ ಮಾಡಿ ಕ್ರಮಜರುಗಿಸಲಾಗುತ್ತಿದೆಯೆಂದು ತಿಳಿಯಬಂದಿದೆ.

ಮೈಸೂರು, ಮಾ 9 — ಇದುವರೆವಿಗೆ ಸಿಡಿಬು ತಡೆಗಟ್ಟುವ ಸಲುವಾಗಿ 95000 ಮಂದಿಗೆ ದೇವಿ ಹಾಕಿರುವುದಾಗಿ ತಿಳಿಯಬಂದಿದೆ.

ನವದೆಹಲಿ, ಮಾ 6 — ಐ.ಎ.ಎ. ಯ ಕ || ಅಹ್ಮದರನ್ನು ಕಾಬೂಲ್‌ನಿಂದ ಖುಲಾಸೆ ಮಾಡಲಾಯಿತು.

ಜಪಾನಿನಲ್ಲಿ

ಇನ್ನು ಮುಂದೆ ವಿವಾಹವು ವಧೂವರರ ಪರಸ್ಪರ ಅನುರಾಗದಿಂದ ನಡೆಯುವುದೆಂದೂ, ತಂದೆತಾಯಿಗಳು ಮಗಳನ್ನು ಮಾರಲು ಹಕ್ಕಿಲ್ಲವೆಂದೂ ಹೇಳಲಾಗಿದೆ.

ಸಂಜನಗೂಡು ದೊಡ್ಡಜಾತ್ರೆ ದನಗಳ ಪ್ರದರ್ಶನ

14-3-46 ರಿಂದ ಮಾಘ ಶುದ್ಧ 16-3-46 ರವರಿಗೆ ದೊಡ್ಡ ಜಾತ್ರೆ ರಥೋತ್ಸವ ಸಂದರ್ಭದಲ್ಲಿ, ದನಗಳ ಪ್ರದರ್ಶನವನ್ನು ಈ ಊರಿನ ಜೋಗಿತೋಪಿನಲ್ಲಿ ಏರ್ಪಡಿಸಿರುತ್ತೆ. ನೀರು ನೆರಳಿನ ಸೌಕರ್ಯ ಚೆನ್ನಾಗಿದೆ ರಾಸುಗಳಿಗೆ ಸುಂಕವಿಲ್ಲ. ವೈದ್ಯ ಸಹಾಯ ಏರ್ಪಡಿಸಿದೆ ಉತ್ತಮ ರಾಸುಗಳಿಗೆ ಬಹುಮಾನ ಕೊಡಲಾಗುತ್ತೆ.

ಎ. ವಿ. ಕೃಷ್ಣ
ಪ್ರೆಸಿಡೆಂಟ್
ಟೌನ್ ಮುನಿಸಿಪಲ್ ಕೌನ್ಸಿಲ್
ಸಂಜನಗೂಡು

At Ranjit

Vijay Laxmi

ಶೋಭನ ಸಮರ್ಥ

ಮೋತೀಲಾಲ್

ಮುಂತಾದವರು ಪಾತ್ರವಹಿಸಿರುವ

ವಿಜಯಲಕ್ಷ್ಮಿ

ವಿವಿಧ ವರ್ತಮಾನ

ಜಪಾನಿನಲ್ಲಿ ರಕ್ಷಣಾ ಸೈನ್ಯಗಳು ರಚನೆ ಮಾಡಲಾಗುವುದು ಜಪಾನು ಯುದ್ಧ ಸನ್ಯಾಸ ತೆಗೆದುಕೊಂಡಿದೆ.

ಇಂಡೋಚೈನಾ ಅಜೆ ಯಂದ್ಧ ಹಡಗುಗಳು ಕಾರ್ಯಾಚರಣೆ ನಡೆಸುತ್ತಿವೆ. ಫ್ರೆಂಚರು ಚೈನಾ ಸೈನಿಕರ ಮೇಲೆ ಧಾಳಿ ನಡೆಸಿದರು.

ದೆಹಲಿಯಲ್ಲಿ ವೈಸರಾಯರ ಭೂಮಿ 70 ಎಕರೆಗಳಲ್ಲಿ 'ಹಚ್ಚು ಆಹಾರ ಬೆಳೆಯಿರಿ' ಚಳವಳಿಯು ಕಾರ್ಯತಃ ಜಾರಿಗೆ ತರಲ್ಪಟ್ಟು, ಉತ್ಸನೆ ಬಿತ್ತನೆ ಕೆಲಸ ನಡೆಯುತ್ತಿದೆ

At Opera — From 8-3-46

ಮೆಹತಾಬ್ — ಸುರೇಂದ್ರ

ಪಾತ್ರವಹಿಸಿರುವ

.... ವಿಶ್ವಾಸ್ ....

MORNING SHOWS



ಯು. ಎಸ್ ಶಾಲೆಗಳಲ್ಲಿ ಮೈದ್ಯ ಶಿಕ್ಷಣ

ಸುಖ ಆರೋಗ್ಯ ಆನಂದದಾಯಕ ಜೀವಿತಕ್ಕೆ



ಸ್ಟೀಮರ್ ಮಾರ್ಕಿನ ಉತ್ಕೃಷ್ಟ ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ಪುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಪೂರ್ಣ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಸೇರಿನ ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 1-8-0 ಮಾತ್ರ.

ನಮ್ಮ ಸುಳಿಂದ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಪೂತರಿಯಾದುದು. ವಿವರಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,
(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)
೧೪. ಗೋವಿಂದಪ್ಪ ನಾಯಕ ರಸ್ತೆ, ಜಿ. ಟಿ. ಮದರಾಸು.

ಹಸಿ ಬೆಟ್ಟದಪುರದ
ಹೊಗೆಸೊಪ್ಪಿನಿಂದ ತಯಾರಾದ
— ಉಂಡೇ ನೆಶ್ಯ —
ಇಲ್ಲಿ ದೊರೆಯುತ್ತೆ
ರಾವಂದೂರ್ ವೀರಶೆಟ್ಟಿ & ಸನ್ಸ್
ಶಿವರಾಂಪೇಟೆ ಮೈಸೂರು.

Edited, Printed and published by M. S. Krishna Rao, at the Satvavadi Press, Chamaraja Agrahar, Mysore

ಅಲ್ಪ ವ್ಯಯದ ಕಾಯಕಲ್ಪ

ಶಕ್ತಿಸುಧಾ

ರಕ್ತವೃದ್ಧಿಗೆ — ಧಾತುಪುಷ್ಟಿಗೆ

ಸಂಜೀವನ

ಬೆಲೆ ಡಬ್ಬಿಗೆ ರೂ. ೧.೮-೦

ವಿಳಾಸ— ಶಕ್ತಿಸುಧಾ, ೧೦೬೭ ಚಾಮರಾಜಪುರಂ, ಮೈಸೂರು